ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು**

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಅರ್ಹ ವ್ಯವಸ್ಥಾಪಕರಿಗೆ ಸಹಾಯಕ ನಿರ್ದೇಶಕರ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ದಿನಾಂಕ: 27.02.2019 ಹಾಗೂ ದಿನಾಂಕ : 15.05.2019ರ ಸಂಖ್ಯೆ : ಸಿಆಸುಇ/186/ಎಸ್ಆರ್ಎಸ್/2018ರ ಆದೇಶಗಳು.
2. ಈ ಕಛೇರಿ ದಿನಾಂಕ:27.04.2022ರ ಸಂಖ್ಯೆ: ಕಾಶಿಇ/13/ ಮ್ಯಾನೇಜರ್/ಜೇಪ/ಬಸ್ಥಾವಿ/2020-21ರ ಅಧಿಕೃತ ಜ್ಞಾಪನದೊಂದಿಗೆ ಪ್ರಕಟಿಸಿರುವ ರಾಜ್ಯವ್ಯಾಪಿ ಉಳಕೆ ಮೂಲವೃಂದ ಹಾಗೂ ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ ವ್ಯವಸ್ಥಾಪಕರ ಅಂತಿಮ ಜೇಷ್ಠತಾ ಪಟ್ಟಿ.
3. ದಿನಾಂಕ:08.11.2023ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಡವಳಿಗಳು .

*****

**ಪ್ರಸ್ತಾವನೆ:**

ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಸಹಾಯಕ ನಿರ್ದೇಶಕರ ಹುದ್ದೆಗಳಿಗೆ ಮ್ಯಾನೇಜರ್ ಹುದ್ದೆಯಿಂದ ಶೇಕಡ.100ರಷ್ಟು ಹುದ್ದೆಗಳನ್ನು ಬಡ್ತಿ ಮೂಲಕ ತುಂಬಲು ಅವಕಾಶ ಕಲ್ಪಿಸಲಾಗಿರುತ್ತದೆ. ಉಲ್ಲೇಖ (2)ರ ಪತ್ರದೊಂದಿಗೆ ಪ್ರಕಟಿಸಿರುವ ಈ ಇಲಾಖೆಯ ರಾಜ್ಯವ್ಯಾಪಿ ಉಳಕೆ ಮೂಲವೃಂದ ಹಾಗೂ ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ ವ್ಯವಸ್ಥಾಪಕರ ಅಂತಿಮ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಸಹಾಯಕ ನಿರ್ದೇಶಕ ವೃಂದದ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಬೇಕಾಗಿರುತ್ತದೆ. ದಿನಾಂಕ:08.11.2023 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಜೇಷ್ಠತೆ ಹಾಗೂ ಅರ್ಹತೆ ಆಧಾರದ ಮೇಲೆ ಅರ್ಹ ಮ್ಯಾನೇಜರ್‌ಗಳಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲು ತೀರ್ಮಾನಿಸಲಾಯಿತು.

ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ವ್ಯವಸ್ಥಾಪಕರ ವೃಂದದಿಂದ ಸಹಾಯಕ ನಿರ್ದೇಶಕರ ವೃಂದಕ್ಕೆ ಬಡ್ತಿ ಹೊಂದಲು ಅರ್ಹರಿರುವ ವ್ಯವಸ್ಥಾಪಕರಿಗೆ ಸಹಾಯಕ ನಿರ್ದೇಶಕರಾಗಿ ಸ್ಥಾನಪನ್ನ ಬಡ್ತಿ ನೀಡಿ ಸ್ಥಳನಿಯುಕ್ತಿ ಆದೇಶ ಹೊರಡಿಸಬೇಕಾಗಿರುವುದರಿಂದ, ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: ಕಾಶಿಇ/55/ಸ.ನಿ/ಬಡ್ತಿ/2023-24/ಬಸ್ಥಾವಿ, ಬೆಂಗಳೂರು, ದಿನಾಂಕ:08.12.2023**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಕೆಳಕಂಡ ವ್ಯವಸ್ಥಾಪಕರಿಗೆ ವೇತನ ಶ್ರೇಣಿ ರೂ.43100-1100-46400-1250-53900-1450-62600-1650-72500-1900-83900/-ರಲ್ಲಿ ತಾತ್ಕಾಲಿಕವಾಗಿ ಹಾಗೂ ಮುಂದಿನ ಆದೇಶದವರೆಗೆ ಸಹಾಯಕ ನಿರ್ದೇಶಕರ ವೃಂದಕ್ಕೆ ಸ್ಥಾನಪನ್ನ ಬಡ್ತಿ ನೀಡಿ ಅವರುಗಳ ಹೆಸರಿನ ಮುಂದೆ ಕಾಲಂ-4ರಲ್ಲಿ ನಮೂದಿಸಲಾಗಿರುವ ಖಾಲಿ ಹುದ್ದೆಗೆ ಎದುರಾಗಿ ಈ ಕೂಡಲೇ ಜಾರಿಗೆ ಬರುವಂತೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.

## ರಾಜ್ಯವ್ಯಾಪಿ ಉಳಿಕೆ ಮೂಲ ವೃಂದ (ಆರ್.ಕೆ.)

| ಕ್ರ.ಸಂ | ಹೆಸರು ಶ್ರೀ/ಶ್ರೀಮತಿ | ಕಾರ್ಯ ನಿರ್ವಹಿಸುತ್ತಿರುವ ಕಛೇರಿ/ಕಾಲೇಜು | ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ/ಕಾಲೇಜು | ಷರಾ |
|---|---|---|---|---|
| 1 | 2 | 3 | 4 | 5 |
| 1 | ಸಂತೋಷ್ ಪಾಂಡು ಕಾಣಕೋಣಕರ್ | ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜು, ಕಾರಾವಾರ. | ಪ್ರಾದೇಶಿಕ ಕಛೇರಿ, ಧಾರವಾಡ. | ಶ್ರೀ.ಪಂಚಾಕ್ಷರಯ್ಯ ಇವರ ವಯೋನಿವೃತ್ತಿಯಿಂದ ತೆರವಾದ ಹುದ್ದೆ |
| 2 | ಸತ್ಯಶಂಕರ್ ಕೆ | ಸರ್ಕಾರಿ ಮಹಿಳಾ ಕಾಲೇಜು, ಎಂ.ಜಿ ರಸ್ತೆ, ಹಾಸನ. | ಪ್ರಾದೇಶಿಕ ಕಛೇರಿ, ಮಂಗಳೂರು. | ಶ್ರೀಮತಿ.ಕಮಲಾಕ್ಷಿ ಇವರ ವರ್ಗಾವಣೆಯಿಂದ ತೆರವಾದ ಹುದ್ದೆ |
| 3 | ಸುಧಾ ಆರ್ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪೇಟೆ, ಮಂಡ್ಯ. | ಪ್ರಾದೇಶಿಕ ಕಛೇರಿ, ಶಿವಮೊಗ್ಗ. | ಶ್ರೀ.ಮಹೇಶ್ವರ್ ಇವರ ವರ್ಗಾವಣೆಯಿಂದ ತೆರವಾದ ಹುದ್ದೆ |
| 4 | ಸಾಕಮ್ಮ ಜಿ.ಎನ್ | ಸರ್ಕಾರಿ ಮಹಿಳಾ ಕಾಲೇಜು, ಚಾಮರಾಜನಗರ. | ಪ್ರಾದೇಶಿಕ ಕಛೇರಿ, ಕಲಬುರಗಿ. | ಶ್ರೀ.ಶಿವಪ್ರಸಾದ್.ಎನ್ ಇವರ ವರ್ಗಾವಣೆಯಿಂದ ತೆರವಾದ ಹುದ್ದೆ |

## ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದ (ಕೆ.ಕೆ.)

| ಕ್ರ.ಸಂ | ಹೆಸರು ಶ್ರೀ/ಶ್ರೀಮತಿ | ಕಾರ್ಯ ನಿರ್ವಹಿಸುತ್ತಿರುವ ಕಛೇರಿ/ಕಾಲೇಜು | ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ/ಕಾಲೇಜು | ಷರಾ |
|---|---|---|---|---|
| 1 | 2 | 3 | 4 | 5 |
| 1 | ಶ್ರೀಧರ.ಎಸ್ | ಪ್ರಾದೇಶಿಕ ಕಛೇರಿ, ಬೆಂಗಳೂರು. | ಕೇಂದ್ರ ಕಛೇರಿ, ಬೆಂಗಳೂರು. | ಶ್ರೀಮತಿ.ಸರಸ್ವತಿ.ಎಂ.ಹೆಚ್, ಇವರ ವಯೋ ನಿವೃತ್ತಿಯಿಂದ ತೆರವಾದ ಹುದ್ದೆ. "ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿರುವ ಬ್ಯಾಕ್‌ಲಾಗ್ ಹುದ್ದೆ." |

**ಸೂಚನೆ:**

1. ಪ್ರಾದೇಶಿಕ ಜಂಟಿ ನಿರ್ದೇಶಕರು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಈ ಆದೇಶವನ್ನು ವೆಬ್‌ಸೈಟ್‌ನಿಂದ ಪಡೆದು ಬಡ್ತಿ ಹೊಂದಿದವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸತಕ್ಕದ್ದು.
2. ಬಡ್ತಿ ಹೊಂದಿದವರು ಸ್ಥಳನಿಯುಕ್ತಿಗೊಳಿಸಲಾದ ಕಛೇರಿ/ಕಾಲೇಜುಗಳಲ್ಲಿ ಈ ಆದೇಶ ಪ್ರಕಟಗೊಂಡ 15 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗಿ ವರದಿ ಮಾಡಿಕೊಳ್ಳತಕ್ಕದ್ದು, ಅಥವಾ ಬಡ್ತಿಯನ್ನು ನಿರಾಕರಿಸತಕ್ಕದ್ದು, ತಪ್ಪಿದಲ್ಲಿ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು.
3. ಬಡ್ತಿಗೊಂಡ ನೌಕರರು ನಿಯಮಾನುಸಾರ ಸೇರುವಿಕೆ ಕಾಲ ಪಡೆಯಲು ಅರ್ಹರಿರುತ್ತಾರೆ.
4. ಬಡ್ತಿ ಹೊಂದಿರುವ ವ್ಯವಸ್ಥಾಪಕರ ಪೈಕಿ ಯಾರಾದರೂ ಪ್ರಸ್ತುತ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ, ಸದರಿ ನಿಯೋಜನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.
5. ಸ್ಥಳ ನಿಯುಕ್ತಿಯ ಮಾರ್ಪಾಡಿಗೆ ಅವಕಾಶವಿರುವುದಿಲ್ಲ.

ಆಯುಕ್ತರು,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ:

1) ಎಲ್ಲಾ ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕರುಗಳಿಗೆ/ ಮೇಲ್ಕಂಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.
2) ಮೇಲ್ಕಂಡ ವ್ಯವಸ್ಥಾಪಕರಿಗೆ (ಸಂಬಂಧಪಟ್ಟ ಕಛೇರಿ/ ಕಾಲೇಜಿನ ಮುಖ್ಯಸ್ಥರ ಮೂಲಕ)
3) ವ್ಯವಸ್ಥಾಪಕರು/ ಅಧೀಕ್ಷಕರು, ಸೇವಾ ವಿಭಾಗ/ ವರ್ಗಾವಣೆ & ನಿಯೋಜನೆ ವಿಭಾಗ ಕೇಂದ್ರ ಕಛೇರಿ, ಬೆಂಗಳೂರು – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
4) ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು - ಸದರಿ ಆದೇಶವನ್ನು ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧ ಅಗತ್ಯ ಕ್ರಮಕ್ಕಾಗಿ.

ಪ್ರತಿಗಳು:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳು/ ಎಲ್ಲಾ ವಿಭಾಗಗಳ ಅಧೀಕ್ಷಕರುಗಳು – ಮಾಹಿತಿಗಾಗಿ.
4) ಕಛೇರಿ ಪ್ರತಿ.